ಮಾತನಾಡುತ್ತಿದ್ದಳು. ಸಣ್ಣ ಊರಿನಿಂದ ಲಾಗೋಸ್ ಎಂಬ ನಗರಕ್ಕೆ ವಲಸೆ ಹೋಗಿ ಅವಳ ತಂದೆ ತಾಯಿಯರು ಅನುಭವಿಸಿದ ಒಂಟಿತನ, ಬಿಡುಗಡೆಗಳ ಬಗ್ಗೆ ಮಾತನಾಡುವಾಗ ಆ ಕಾಲದ ದುಃಖ ಈ ಗಟ್ಟಿಗಿತ್ತಿಯ ಕಣ್ಣಂಚಲ್ಲಿ ತೇಲುವುದ ಕಂಡಿದ್ದೆ. ಲಾಗೋಸ್ ನಗರದ ಮಾರ್ಕೆಟ್ಟಿನಲ್ಲಿ ಅವಳೂ ಅವಳ ತಮ್ಮನೂ ಓಡಾಡಿದ ವಿವರಣೆ ಕೇಳಿದಾಗಲಂತೂ ಅವಳ ಅನುಭವಗಳಿಗೂ ಹುಬ್ಬಳ್ಳಿಯಲ್ಲಿ ಬೆಳೆದ ನನ್ನ ಅನುಭವಗಳಿಗೂ ಅಂಥ ವ್ಯತ್ಯಾಸವೇನೂ ಕಾಣಲಿಲ್ಲ.

"ಈ ಅಮೆರಿಕದಲ್ಲಿ ಅಷ್ಟೇ ಅನ್ನಿಸುತ್ತದೆ ನೋಡು, ದೊಡ್ಡ ಮಕ್ಕಳನ್ನೂ ಒಬ್ಬೊಬ್ಬರೇ ಎಲ್ಲಿಗೂ ಕಳಿಸುವ ಹಾಗೆಯೂ ಇಲ್ಲ, ಬಿಡುವ ಹಾಗೆಯೂ ಇಲ್ಲ. ಹಾಗೇನಾದರೂ ಕಳಿಸಿದ್ದೇ ಆದರೆ ಬೇಜವಾಬ್ದಾರಿ ಪೇರೆಂಟಿಂಗ್ ಅಂತ ನಮಗೇ ದಂಡ ಹಾಕುತ್ತಾರಂತೆ. ಅದು ಮರುಕಳಿಸಿದರೆ ಮಕ್ಕಳನ್ನು ಚೈಲ್ಡ್ ಸರ್ವಿಸಸ್‌ನವರಿಗೆ ಒಪ್ಪಿಸಿ ನಮ್ಮನ್ನು ಅನ್–ಪೇರೆಂಟ್ ಅಂತ ಘೋಷಿಸುತ್ತಾರಂತೆ. ನಾವೆಲ್ಲ ಚಿಕ್ಕವರಿದ್ದಾಗ ಎಷ್ಟು ಸಲ ಚಿಕ್ಕಪ್ಪಂದಿರಿಗೆ ಬೀಡಿ ತಂದು ಕೊಟ್ಟಿಲ್ಲ, ತಕ್ಷಣ ಓಡಿ ಹೋಗಿ ಅಡುಗೆಯ ಸಾಮಗ್ರಿ ತಂದು ತಾಯಿಯ ಹತ್ತಿರ ಭೇಷ್ ಅನ್ನಿಸಿಕೊಂಡಿಲ್ಲ. ಅಂಥ ಸಣ್ಣ ಸುಖಗಳು ಸಿಗೋದೇ ಇಲ್ಲವಲ್ಲ ನಮ್ಮ ಮಕ್ಕಳಿಗೆ" ಎನ್ನುತ್ತಿದ್ದಳು. ನಾನು ಹೌದೆಂದು ಒಪ್ಪಿಕೊಂಡರೂ ಆ ಬೀಡಿ ತಂದುಕೊಡುವ ಕಷ್ಟ ಮಾತ್ರ ಯಾರಿಗೂ ಬೇಡ ಅಂದುಕೊಂಡೆ.

ಬ್ರಿಯಾನಾ ಜನ್ಮತಃ ಪಡೆದುಕೊಂಡ ದಪ್ಪ ಗುಂಗುರು ಕೂದಲನ್ನು ಸಪೂರ ಕಾರ್ನ್‌ರೋ ಶೈಲಿಯಲ್ಲಿ ವಿನ್ಯಾಸಗೊಳಿಸಿದ್ದಳು. ಟೇಮಿಗೂ ಕೂದಲು ಗಂಟಾಗಬಾರದು ಎಂದು ಏಳೆಂಟು ಜುಟ್ಟುಗಳನ್ನು ಹಾಕಿದ್ದು ಮಗುವಿನ ಅಂದವನ್ನು ಇನ್ನಷ್ಟು ಹೆಚ್ಚಿಸಿತ್ತು.

ಅಮೆರಿಕನ್ ವಸ್ತ್ರ ವಿನ್ಯಾಸಕರೂ ತಯಾರಕರೂ ಮಕ್ಕಳ ಬಟ್ಟೆಗಳಲ್ಲಿ ಹುಡುಗಿಯರ ಬಣ್ಣಗಳು, ಹುಡುಗರ ಬಣ್ಣಗಳು ಎಂದು ವಿಂಗಡಿಸುವ ಬಗ್ಗೆ ನಮ್ಮಿಬ್ಬರಿಗೂ ಒಂದೇ ಬಗೆಯ ಅಸಮಾಧಾನವಿತ್ತು. ಮಕ್ಕಳ ಬಟ್ಟೆ ಮಾರುವ ಎಲ್ಲ ವೆಬ್‌ಸೈಟುಗಳಲ್ಲೂ ಗುಲಾಬಿ, ನೇರಳೆ, ಹಳದಿ ಬಣ್ಣಗಳನ್ನು ಹೆಣ್ಣುಮಕ್ಕಳಿಗೆಂದೂ, ನೀಲಿ, ಕಂದು, ಬೂದು ಬಣ್ಣಗಳನ್ನು ಗಂಡುಮಕ್ಕಳ ಬಟ್ಟೆಗಳಿಗೆಂದೂ ಹಂಚಲಾಗಿತ್ತು. ಬೂದು ಬಣ್ಣದ ಫ್ರಾಕು ಮತ್ತು ಪಿಂಕ್ ಬಣ್ಣದ ಶರ್ಟು ಎಷ್ಟು ಹುಡುಕಿದರೂ ಸಿಗುತ್ತಿರಲಿಲ್ಲ. ಈ ನಿಯಮವನ್ನು ಮುರಿಯಲೆಂದೇ ನಾವು ವಿರುದ್ಧ ಲಿಂಗದ ಬಟ್ಟೆಗಳನ್ನು ಮಕ್ಕಳಿಗೆ ತೊಡಿಸಿದ್ದೂ ಇದೆ.

ಹುಡುಗಿಯರನ್ನು ಬಾರ್ಬಿ ಗೊಂಬೆಯ ಹಾಗೆ ಡ್ರೆಸ್ ಮಾಡುವ, ಹುಡುಗರಿಗೆ ಸಂತೆಯಲ್ಲಿ ಕಳೆದು ಹೋಗುವಂತೆ ಕಾಣುವ ತಿಳಿ ಬಣ್ಣಗಳ ಬಟ್ಟೆ ತೊಡಿಸುವ ಹಿಂದಿನ ಹುನ್ನಾರ ನಮಗರ್ಥವಾಗದ್ದು. ಇದು ಚಿಕ್ಕ ವಯಸ್ಸಿನಿಂದಲೇ ಕಣ್ಣಿಗೆ ಹಬ್ಬವಾಗುವಂತೆ ಆಕರ್ಷಕವಾಗಿ ಕಾಣಬೇಕೆಂದು ಹುಡುಗಿಯರಿಗೂ, ದಿರಿಸಿನ ಬಗ್ಗೆ ವಿಶೇಷ ಆಸಕ್ತಿಯನ್ನು ತೋರಬೇಕಿಲ್ಲ ಅಂತ ಹುಡುಗರಿಗೂ ಅಮೂರ್ತ ಒತ್ತಾಯವನ್ನು ಹೇರಿದಂತೆ ಕಾಣುತ್ತಿತ್ತು. ಹಿಲರಿ ಕ್ಲಿಂಟನ್, ಮಿಚೆಲ್ ಒಬಾಮಾ, ಕಮಲಾ ಹ್ಯಾರಿಸ್, ಎಲಿಜಬೆತ್ ವಾರನ್ ಮುಂತಾದವರ ಸಾಧನೆಗಳ ಕುರಿತು ಬರೆಯುವಾಗ ಪ್ರತಿಷ್ಠಿತ ಪತ್ರಿಕೆಗಳೂ ಅವರು ತೊಡುವ ಬಟ್ಟೆಗಳ ವರ್ಣಿಸುತ್ತಲೇ ಶುರು ಮಾಡುವುದನ್ನು ಗಮನಿಸಿದ್ದೆವು.

ಮಿಚೆಲ್ ಒಬಾಮಾ ಇತ್ತೀಚೆಗೆ ಬರೆದ 'ಬಿಕಮಿಂಗ್' ಎಂಬ ಆತ್ಮಕತೆಯಲ್ಲಿ, "ಯಾವುದೇ ಕಾರ್ಯಕ್ರಮವಿದ್ದಾಗ ನಾನೂ ನನ್ನಿಬ್ಬರು ಹೆಣ್ಣುಮಕ್ಕಳೂ ಯಾವ ವಿನ್ಯಾಸದ ಬಟ್ಟೆ ತೊಡುತ್ತೇವೆ, ಯಾವ ರೀತಿಯ ಕೇಶ ವಿನ್ಯಾಸವಿದೆ, ಎಷ್ಟು ಇಂಚಿನ ಹೈಹೀಲ್ಡು ಧರಿಸುತ್ತೇವೆ ಅಂತ ಮಾಧ್ಯಮಗಳಲ್ಲೆಲ್ಲ ವರದಿಯಾಗುತ್ತಿತ್ತು. ಆದರೆ, ನನ್ನ ಗಂಡ ದಿನವೂ ಒಂದೇ ಬಣ್ಣದ ಸೂಟು ಧರಿಸಿ ತಲೆಗೆ ಹಣಿಗೆ ತಾಗಿಸುವ ಜರೂರೂ ಇಲ್ಲದೇ ಹೊರಹೋಗಬಹುದಿತ್ತು" ಅಂತ ಬರೆಯುತ್ತಾರೆ. ಬ್ರಿಯಾನಾ